

## ಕನ್ನಡಿಗರ ಹೆಮ್ಮೆ; ರಾಜ್ಯೋತ್ಸವ ಕೊಡುಗೆ

‘ಪ್ರಚಂಡ, ಆತ್ಮ ನಿರ್ಭರತೆಯ ಹಾದಿಯ ದೃಢ ಸಂಕಲ್ಪದ ಹೆಜ್ಜೆ’ (ನೇಮಿಚಂದ್ರ, ನ. 3) ಬರಹ ರಕ್ಷಣಾ ಹೆಲಿಕಾಪ್ಟರ್ ಬಗೆಗಿನ ಅಮೂಲ್ಯ ಮಾಹಿತಿ ನೀಡಿದೆ. ದೇಶದ ರಕ್ಷಣಾ ವ್ಯವಸ್ಥೆಗೆ ಬಲ ಹಾಗೂ ಅತ್ಮಸ್ಥೈರ್ಯವನ್ನು ತುಂಬಿ ಸದೃಢಗೊಳಿಸುವ ವ್ಯವಸ್ಥಿತ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಹೆಲಿಕಾಪ್ಟರ್ ಸೇರ್ಪಡೆಯಾಗಿರುವುದು ಕನ್ನಡಿಗರ ಹೆಮ್ಮೆ. ಅದೂ ಈ ವರ್ಷದ ರಾಜ್ಯೋತ್ಸವ ಕೊಡುಗೆಯಾಗಿ ನಮ್ಮ ನಗರದಲ್ಲಿ ಸ್ಥಾಪಿತವಾದ ನವರತ್ನಗಳಲ್ಲಿ ಒಂದಾದ ಎಚ್‌ಎಎಲ್‌ನಲ್ಲಿ ತಯಾರಾಗಿದ್ದು ಎಂಬ ವಿಷಯ ಇನ್ನೂ ಖುಷಿಯನ್ನು ತರುವಂಥದ್ದು.

—ಎಂ.ಆರ್. ಚಂದ್ರಶೇಖರ್, ಬೆಂಗಳೂರು

## ವಸ್ತುನಿಷ್ಠ ಬರಹ

‘ನಿಮ್ಮೊಡನೆ’ ಬರಹ (ಎನ್. ಉದಯಕುಮಾರ್, ನ. 3) ವಸ್ತುನಿಷ್ಠವಾಗಿದೆ. ನಮ್ಮ ದೇಶದಲ್ಲಿ ಇಂದು ನಮ್ಮನ್ನಾಳುವವರು ಜನರ ಪ್ರಾಥಮಿಕ ಅಗತ್ಯಗಳನ್ನು ಪೂರೈಸುವ ಬಗ್ಗೆ ಗಮನಹರಿಸುವುದನ್ನು ಬಿಟ್ಟು ಜನರ ಭಾವನೆಗಳನ್ನು ಕೆರಳಿಸಿ, ಅವರ ಗಮನವನ್ನು ಬೇರೆಡೆಗೆ ಸೆಳೆಯುವ ಪ್ರಯತ್ನ ಮಾಡುತ್ತಿರುವ ವಿಚಾರ ಬರಹದಲ್ಲಿದೆ. ರಾಜಕಾರಣಿಗಳು ಜನರ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸುವುದನ್ನೇ ಮರೆತು ಬಿಟ್ಟಿದ್ದಾರೆ. ಕೋಮು ಸೌಹಾರ್ದವನ್ನು ಕದಡುತ್ತಾ ಜನರನ್ನು ಭ್ರಮೆಗೆ ದೂಡುವಂಥ ಕೆಲಸ ಮಾಡುತ್ತಿದ್ದಾರೆ.

ಇವೆಲ್ಲದರಿಂದ ಸ್ವಲ್ಪವಾದರೂ ಮುಕ್ತಿ ಪಡೆಯಲು ಚುನಾವಣೆಗಳಲ್ಲಿ ಯಾವುದೇ ರೀತಿಯ ಆಸೆ, ಆಕಾಂಕ್ಷೆಗಳಿಗೆ ಒಳಗಾಗದೇ ಸಮರ್ಥವಾಗಿ ಕೆಲಸ ಮಾಡುವ ಅಭ್ಯರ್ಥಿಗಳನ್ನು ಆಯ್ಕೆಮಾಡುವಲ್ಲಿ ಜನಜಾಗೃತರಾಗಬೇಕಾಗಿದೆ.

—ಚಾವಲ್ಮನೆ ಸುರೇಶ್ ನಾಯಕ್, ಕೊಪ್ಪ

ಸಂಪಾದಕೀಯ ಬರಹ ಸರ್ಕಾರದ ಕಣ್ಣು ತೆರೆಸುವಂತಿದೆ. ರಾಜಕಾರಣಿಗಳು ಕೂಡ ಎಚ್ಚೆತ್ತುಕೊಳ್ಳುವ ಕೆಲಸ ಮಾಡಬೇಕಾಗಿದೆ. ಎಷ್ಟೋ ರಸ್ತೆ ಗುಂಡಿಗಳಲ್ಲಿ ಜನರು ಅಪಾಯ ತಂದುಕೊಂಡಿರುವ ಉದಾಹರಣೆ ನಮ್ಮ ಮುಂದಿದೆ. ನೀರು, ಆಸ್ಪತ್ರೆ, ಶಿಕ್ಷಣ, ಸ್ವಚ್ಛ ಶೌಚಾಲಯ... ಮುಂತಾದವನ್ನು ಸರ್ಕಾರ ಸರಿಯಾದ ಸ್ಥಿತಿಯಲ್ಲಿ ವ್ಯವಸ್ಥಿತಗೊಳಿಸುವುದು ಸರ್ಕಾರದ ಜವಾಬ್ದಾರಿ ಆಗಿದೆ.

—ಬಿ.ಎಸ್. ಮುಳ್ಳೂರ, ಹಲಗತ್ತಿ

## ಭೇಷ್ ಅಶ್ವಿನಿ!



‘ಜಾತಿ ತಾರತಮ್ಯ ನಿವಾರಿಸಲು ಶತಮಾನಗಳೇ ಬೇಕು’, ಕನ್ನಡದ ಹೆಮ್ಮೆ, ಕೆ.ಪಿ. ಅಶ್ವಿನಿ ಸಂದರ್ಶನ (ರಾಘವೇಂದ್ರ ಕೆ. ನ. 3) ಚೆನ್ನಾಗಿ ಮೂಡಿಬಂದಿದೆ. ವಿಶ್ವಸಂಸ್ಥೆಯ ಜನಾಂಗೀಯ ಭೇದ ವಿಶೇಷ ತಜ್ಞೆ ಆಗಿ ಆಯ್ಕೆಯಾದ ಅಶ್ವಿನಿ ಅವರಿಗೆ ಅಭಿನಂದನೆಗಳು. ಇವರು ಆಯ್ಕೆಯಾದ ಸಂದರ್ಭದಲ್ಲಿ ಭಾರತದ ಯಾವುದೇ ಮಾಧ್ಯಮಗಳು ಇವರ ಕುರಿತು ವಿವರವಾದ ವರದಿ ಮಾಡದೇ ಇರುವುದು ಶೋಚನೀಯ ಸಂಗತಿ. ಅವರ ಆಳವಾದ ಜ್ಞಾನ, ವಿಚಾರಗಳು ಮುಂದೆ ವಿಶ್ವಸಂಸ್ಥೆಯಲ್ಲಿ ಅವರನ್ನು ಉನ್ನತ ಮಟ್ಟದಲ್ಲಿ ಬೆಳೆಸುವುದರಲ್ಲಿ ಯಾವುದೇ ಅನುಮಾನವಿಲ್ಲ.

—ಧ್ರುವ ಪಾಟೀಲ್, ಹಂಪಿ

ಅಶ್ವಿನಿ ಅವರ ಸಂದರ್ಶನ ಚೆನ್ನಾಗಿದೆ. ಅವರ ಬಾಲ್ಯದಿಂದ ಇದುವರೆಗಿನ ಓದು ಮತ್ತು ಹೋರಾಟ ಕಥನವನ್ನು ‘ಸುಧಾ’ ಚೆನ್ನಾಗಿ ಪರಿಚಯಿಸಿದೆ.

—ರಮೇಶ ಗಬ್ಬೂರ್, ಗಂಗಾವತಿ



## ಮರಣೋತ್ತರ ಪದ್ಮಶ್ರೀ ನೀಡಲಿ

ಕುಂದನಿ ಬೆಟ್ಟದ ಜೀವ (ಪ್ರವೀಣ ಕುಲಕರ್ಣಿ, ನ. 3) ಸೆಲೆಬ್ರಿಟಿ ಬರಹದಲ್ಲಿ ದಾಸನ ದೊಡ್ಡಿಯ ಕಾಮೇಗೌಡರ ಪರಿಸರ ಕಾಳಜಿ ಮತ್ತು ಪ್ರಾಣಿ ಪಕ್ಷಿಗಳ ಬಗ್ಗೆ ಅವರಿಗಿರುವ ಕಾಳಜಿ ಬಗ್ಗೆ ಓದಿ ಬಹಳ ಸಂತೋಷವಾಯಿತು. ಕಾಮೇಗೌಡರ ಸಾಧನೆಯನ್ನು ನೋಡಿ ನಮ್ಮಂತಹ ವಿದ್ಯಾವಂತರು ನಾಚಿಕೆಪಡಬೇಕು. ತಮ್ಮ ಸ್ವಂತ ದುಡಿಮೆಯಿಂದ ಕೆರೆ ಕಟ್ಟೆಗಳನ್ನು ನಿರ್ಮಿಸಿರುವುದು ಶ್ಲಾಘನೀಯ. ಅವರ ಈ ಸಾಧನೆಗೆ ಮರಣೋತ್ತರ ಪದ್ಮಶ್ರೀ ಪ್ರಶಸ್ತಿ ನೀಡಬೇಕೆಂದು ಸರ್ಕಾರಕ್ಕೆ ಮನವಿ.

—ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

## ಕಥೆ ಮನ ಕಲಕಿತು

‘ದ್ರೋಹ’ (ಡಾ. ಪ್ರೇಮಲತ ಬಿ., ನ. 3) ಕಥೆ ಮನಸ್ಸನ್ನು ಬಹಳ ಕಲಕಿತು. ಯುದ್ಧ, ಯುದ್ಧದಲ್ಲಿ ಮಡಿದವರಿಗಿಂತ ಸೆರೆ ಸಿಕ್ಕವರ ಪಾಡು ಊಹಿಸಲಸದಳ ಆಗಿತ್ತು. ಅಚಾತುರ್ಯದಿಂದ ಗೆಳೆಯನ ಫೋನ್ ನಂಬರ್ ಮಿಲಿಟರಿಯವರ ಕೈ ಸೇರಿ ಇಡೀ ಕುಟುಂಬವನ್ನೇ ಬಲಿ ಪಡೆದದ್ದು ನಿಜಕ್ಕೂ ದುರ್ದೈವವೇ ಸರಿ.

—ಪ್ರಕಾಶ್ ಮಲ್ಕಿಒಡೆಯರ್, ಹೂವಿನ ಹಡಗಲಿ

‘ಕಥೆ ಎಂದರೆ ಕೇವಲ ಕಟ್ಟುಕಥೆಯಲ್ಲ, ಅದು ಮಾನವನ ವ್ಯಥೆ’ ಎಂಬ ಮಾತಿಗೆ ಅನುಗುಣವಾಗಿ ಈ ಕಥೆ ಹೆಣೆಯಲಾಗಿದೆ. ಸ್ನೇಹ ಸಂಬಂಧ ಪರಸ್ಪರ ನಂಬುಗೆ, ವಿಶ್ವಾಸ ಮತ್ತು ಗೌರವದ ಭಾವನೆಗಳ ಮೇಲೆ ನಿಂತಿರುತ್ತದೆ. ತನ್ನದಲ್ಲದ ತಪ್ಪಿಗೆ ತನ್ನ ಸ್ನೇಹಿತನ ನಂಬುಗೆ ಕಳೆದುಕೊಂಡಿರುವ ಕಥೆಯ ನಾಯಕ ತನ್ನ ಅಮಾಯಕತೆ ಸಾಧಿಸಲಾಗದೆ ಶುದ್ಧ ಮಾನವ ಸಂಬಂಧ ಮರುಸ್ಥಾಪಿಸುವಲ್ಲಿ ಅನುಭವಿಸುವ ಸೋಲು ತಂದೊಡ್ಡಿದ ವ್ಯಥೆ ಕಥೆಯುದ್ದಕ್ಕೂ ವ್ಯಾಪಿಸಿಕೊಂಡಿದೆ.

—ಶ್ರೀಧರ ಪಿ.

## ಭಾಷಾಭಿಮಾನ

‘ಕನ್ನಡ ಶಾಲೆ ಮನೇಲಲ್ವೇ...’ (ಕೋಡಿಬೆಟ್ಟು ರಾಜಲಕ್ಷ್ಮಿ, ನ. 3) ಲೇಖನ ಓದಿದಾಗ ಮಕ್ಕಳಲ್ಲಿ ಮಾತ್ರವಲ್ಲ, ಎಲ್ಲರಿಗೂ ಕನ್ನಡ ಭಾಷಾಭಿಮಾನವು ಬೆಳೆಯುತ್ತದೆ. ಮನೆಯಲ್ಲಿ ತಂದೆ ತಾಯಿ, ಶಾಲೆಯಲ್ಲಿ ಉಪಾಧ್ಯಾಯರು ಈ ನಿಟ್ಟಿನಲ್ಲಿ ಮಕ್ಕಳನ್ನು ಪ್ರೋತ್ಸಾಹಿಸಿದರೆ, ಕನ್ನಡ ಎಂದೆಂದಿಗೂ ಉಳಿಯುತ್ತದೆ. ರಾಜ್ಯೋತ್ಸವ ಸಮಯದಲ್ಲಿ ಕನ್ನಡ ಉಳಿಸುವ ಬಗ್ಗೆ ಮಾಹಿತಿ ನೀಡುವ ಲೇಖನ ನೀಡಿದ್ದಕ್ಕೆ ‘ಸುಧಾ’ ಪತ್ರಿಕೆಗೆ ಧನ್ಯವಾದಗಳು.

—ಜಯಲಕ್ಷ್ಮಿ ಉಪಾಧ್ಯಾಯ, ಕಂಚಾರ್ತಿ

‘ನೀವು ಕೇಳಿದಿರಿ’ ವಿಭಾಗದಲ್ಲಿ ಪ್ರಕಟವಾದ ಕೆ.ಎಸ್. ಸೋಮೇಶ್ವರ ಅವರ ಪ್ರಶ್ನೆಯಲ್ಲಿ ‘ಮುಂಗಾರು ಮಳೆ 2’ ನಿರ್ದೇಶಕ ಯೋಗರಾಜ್ ಭಟ್ ಎಂದಿದೆ. ಈ ಚಿತ್ರದ ನಿರ್ದೇಶಕರು ಶಶಾಂಕ್.

—ಸುಧೀಂದ್ರ

## ಲೇಖನಗಳು ಇಷ್ಟವಾದವು

‘ಮರಗಳ ಕಥೆ’ಯಲ್ಲಿಯ ‘ಜಗಳಗಂಟಿ ಮರ’ವೆಂಬ (ವಿನು ಗಂಗೆ, ಅ. 20) ಸಸ್ಯದ ವಿವರ ಕುತೂಹಲಕಾರಿಯಾಗಿತ್ತು. ಮುಖಪುಟ ಲೇಖನ– ‘ಸಾವಯವ ಆಹಾರ’ ಲೇಖನ, ಗುಬ್ಬಿವೀರಣ್ಣ ಬರಹಗಳೆಲ್ಲವೂ ಇಷ್ಟವಾದವು.

—ಮಾಲತಿ ಪಟ್ಟಣಶೆಟ್ಟಿ, ಧಾರವಾಡ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in